# ವಸಾಹತುಶಾಹಿ ಪರಿಣಾಮದ ಸಾಂಕೇತಿಕ ಕಾದಂಬರಿ ಒಡ್ಡಿದ ಉರುಳು



ಬಿ. ಜನಾರ್ದನ ಭಟ್

ದಕ್ಷಿಣ ಕನ್ನಡದ ಪ್ರಗತಿಶೀಲ ಚಿಂತಕ- ಸಾಹಿತಿ ಅ. ಗೌ. ಕಿನ್ನಿಗೋಳಿ ಅವರು 1957 ರಲ್ಲಿ ಪ್ರಕಟಿಸಿದ 'ಒಡ್ಡಿದ ಉರುಳು' ಎಂಬ ಕಾದಂಬರಿಯು ಕನ್ನಡದ ಒಂದು ವಿಶಿಷ್ಟ ವಸಾಹತೋತ್ತರ ಕಾದಂಬರಿಯಾಗಿದೆ. 'ಒಡ್ಡಿದ ಉರುಳು' ಕಾದಂಬರಿಯ ವೈಶಿಷ್ಟ್ಯವೆಂದರೆ ವಸಾಹತುಶಾಹಿಯ ನಿಯಂತ್ರಣದಲ್ಲಿದ್ದ ಸ್ವಾತಂತ್ರ್ಯಪೂರ್ವ ಸಮಾಜವನ್ನು ಪ್ರಗತಿಶೀಲ ನೆಲೆಯಲ್ಲಿ ಗ್ರಹಿಸಿ, ಸಾಂಕೇತಿಕವಾಗಿ ಅಭಿವ್ಯಕ್ತಿಸಿರುವುದು. ಹಾಗಾಗಿ ವಸಾಹತುಶಾಹಿ ಅನುಭವವು ದಾಖಲಾಗಿರುವ ಅಪರೂಪದ ಕೃತಿಗಳಲ್ಲಿ ಇದೂ ಒಂದು. 'ಒಡ್ಡಿದ ಉರುಳು' ಕಾದಂಬರಿಯಲ್ಲಿ ಬ್ರಿಟಿಷ್ ವಸಾಹತುಶಾಹಿಯ ಉಪಸ್ಥಿತಿ ಇರುವಂತೆ ಇದರ ಸ್ವರೂಪ ಇದೆ. ಸ್ವಾತಂತ್ರ್ಯಾನಂತರವೇ ಕಾದಂಬರಿ ಬರೆದಿರುವುದರಿಂದ ಸ್ವಾತಂತ್ರ್ಯಪ್ರಾಪ್ತಿಯೂ ಸಾಂಕೇತಿಕವಾಗಿ ಇದರಲ್ಲಿ ಬಂದಿದೆ.

'ಒಡ್ಡಿದ ಉರುಳು' ಕಾದಂಬರಿಯ ಮುಖ್ಯ ಪಾತ್ರ (ಪ್ರೊಟಾಗೊನಿಸ್ಟ್) ಸಿದ್ಧಣ್ಣ ಸೆಟ್ಟಿ ಎಂಬವನು – ಊರಿನ ಗುತ್ತಿನ ಯಜಮಾನ. ಅವನು ಹುಟ್ಟಿದ್ದು ಬ್ರಿಟಿಷ್ ಸೈನಿಕರು ಗುತ್ತಿನ ಮನೆಯ ವಿವಾಹಿತ ಯುವತಿಯ ಮೇಲೆ ಎಸಗಿದ ಅತ್ಯಾಚಾರದ ಫಲವಾಗಿ. ಹಾಗೆ ಹುಟ್ಟಿದ ಸಿದ್ಧಣ್ಣನು ಊರಿನಲ್ಲಿ ನಡೆಸುವ ಶೋಷಣೆ, ವಂಚನೆ ಮತ್ತು ಕ್ರೌರ್ಯಗಳು ಬ್ರಿಟಿಷರ ಆಳ್ವಿಕೆಯ ಪ್ರತಿರೂಪವಾಗಿರುವುದರಿಂದ ಇದನ್ನು ಸಾಂಕೇತಿಕ ಕಾದಂಬರಿ ಎಂದು ಪರಿಗಣಿಸಬೇಕಾಗುತ್ತದೆ. ಇಲ್ಲಿನ ಸಿದ್ಧಣ್ಣನ ಆಳ್ವಿಕೆ ಬ್ರಿಟಿಷ್ ಆಳ್ವಿಕೆಗೆ ರೂಪಕವಾಗಿದೆ. ಸಿದ್ಧಣ್ಣನ ಯಾವ ವರ್ತನೆಗಳು ಬ್ರಿಟಿಷರ ವಸಾಹತುಶಾಹಿಯ ಸಾಂಕೇತಿಕ ಅಭಿವ್ಯಕ್ತಿಗಳು ಎನ್ನುವುದನ್ನು ಮುಂದೆ ನೋಡೋಣ.

ಕಾದಂಬರಿಯ ಪ್ರಾರಂಭದಲ್ಲಿಯೇ ಒಂದು ವಿಚಿತ್ರ ಘಟನೆ ನಡೆಯುತ್ತದೆ. ಹೊಸದಾಗಿ ಮದುವೆಯಾದ ವೇಣೂರಿನ ಪ್ರತಿಷ್ಠಿತ ಬಂಟ ಮನೆತನದ ಹುಡುಗಿ ಗಂಗಕ್ಕ ಆಷಾಡ ತಿಂಗಳಲ್ಲಿ ತವರು ಮನೆಗೆ ಬಂದಿದ್ದಳು. ಅವಳನ್ನು ಮದುವೆ ಮಾಡಿಕೊಟ್ಟದ್ದು ಸಾಂತೂರಿನ ದೇಜಪ್ಪ ಸೆಟ್ಟಿಗೆ. ಅವಳು ಊರಿನಲ್ಲಿ ಒಂದೆರಡು ಮೈಲುಗಳ ದೂರವಿದ್ದ ಚಿಕ್ಕಪ್ಪನ ಮನೆಗೆ 'ಸೇಮಿಗೆ ಮಣೆ'ಯನ್ನು ತರಲು ಹೋಗಿದ್ದಳು. ಅದನ್ನು ಹಿಡಿದುಕೊಂಡು ಮನೆಗೆ ಬರುವಾಗ ಇದ್ದಕ್ಕಿದ್ದಂತೆ ಬಿರುಮಳೆ ಸುರಿದು, ಗಂಗಕ್ಕ ರಕ್ಷಣೆಗಾಗಿ ದಾರಿಯಲ್ಲಿದ್ದ 'ಜಾರಂದಾಯ' ದೈವದ 'ಸಾನ'ದ (ಗುಡಿ)ಒಳಗೆ ಹೋಗಿ ನಿಲ್ಲುತ್ತಾಳೆ. ದೈವಗಳ ಗುಡಿಗೆ ಚಿಲಕ ಹಾಕುವುದಲ್ಲದೆ ಬೀಗ ಹಾಕುತ್ತಿರಲಿಲ್ಲ. ಸ್ವಲ್ಪ ಹೊತ್ತಿಗೆ ಕುದುರೆಯೇರಿ ಎಲ್ಲಿಗೋ ಹೋಗುತ್ತಿದ್ದ ಇಬ್ಬರು ಬ್ರಿಟಿಷ್ ಸೈನಿಕರು ಮಳೆಯಲ್ಲಿ ಮುಂದೆ ಹೋಗಲಾಗದೆ ಅದೇ ಗುಡಿಯೊಳಗೆ ಪ್ರವೇಶಿಸುತ್ತಾರೆ. ಯುವತಿಯೂ,